

ವಿಶ್ವಕ್ಕೆ ಕೊಡುಗೆಯನ್ನು ನೀಡುತ್ತದೆ. ನಮ್ಮೊಂದಿಗೆ ನೀವೂ ಸಂತಸಪಡಿ ಅನ್ನೋ ದೇಶ ಭಾರತ. ಬೇರೆ ಬೇರೆ ರಾಜ್ಯಗಳಲ್ಲಿ ವಿಧ ವಿಧದ ಆಚಾರ ವಿಚಾರಗಳು ಇರುತ್ತದೆ. ಆದರೂ ಹಬ್ಬ ಹರಿದಿನಗಳು ಬಂದಾಗ ನಾವು ಎಲ್ಲಿದ್ದೇವೆಯೋ ಅಲ್ಲಿನ ಹಬ್ಬವನ್ನು ನಾವು ಆಚರಿಸುತ್ತೇವೆ. ಇದು ಆಭರಣದ ವಿಷಯದಲ್ಲೂ ಅಷ್ಟೆ, ಒರಿಸ್ಸಾದಲ್ಲಿ ಶಂಖ ಆಭರಣಗಳು ಬಹಳ ಖ್ಯಾತಿ. ಕರ್ನಾಟಕದಲ್ಲೂ ಖಡಾ ಶಂಖ ಬಳೆ ಚಲಾವಣೆಯಲ್ಲಿ ಇದೆ. ಆದರೆ ಒರಿಸ್ಸಾದಲ್ಲಿ ಶಂಖ ಆಭರಣ ಎಲ್ಲರ ಮನೆಗಳಲ್ಲೂ ಇವೆ.

ಫ್ಯಾನ್ಸಿ ಅಂಗಡಿಗಳಲ್ಲಿ ಸಿಗುವ ಕೃತಕ ಶಂಖ ಆಭರಣಗಳಿಗಿಂತ ಹೆಚ್ಚು ಚಿನ್ನದ ಮಳಿಗೆಗಳಲ್ಲಿ ಸಿಗುವ ಶಂಖಾಭರಣ ಶೋಭಿಸುತ್ತದೆ.

## ಏನಿದು ಶಂಖ ಆಭರಣ?

ಈ ಆಭರಣ ಶುದ್ಧವಾದ ಶಂಖವನ್ನೇ ಒಳಗೊಂಡಿದ್ದು ಇದರ ಮೇಲೆ ಚಿನ್ನದ ತಗಡಿನಿಂದ ಹೂವು, ಬಳ್ಳಿಗಳನ್ನು ಇದರ ಮೇಲೆ ಅಂಟಿಸಲಾಗಿದೆ. ಇದರಲ್ಲಿ ಚಿನ್ನ ಕಡಿಮೆ ಪ್ರಮಾಣದಲ್ಲಿ ಬಳಕೆಯಾಗಿದ್ದು ಆಭರಣ ಬಹಳ ದೊಡ್ಡದಾಗಿದೆ. 8 ಗ್ರಾಂ ನಲ್ಲಿ ದೊಡ್ಡ ನೆಕ್ಲೇಸ್ ತಯಾರಾಗುತ್ತದೆ.

ಕೆಲವು ಫ್ಯಾಷನ್ ಪ್ರಿಯರಿಗೆ ಆಭರಣದಲ್ಲಿ ಬಣ್ಣ ಕಾಣಬೇಕು. ಅದು ಡ್ರೆಸ್‌ಗೆ ಮ್ಯಾಚ್ ಆಗಬೇಕು. ಕಿವಿಯೋಲೆಯ ಹಿಂದಿನ ತಿರುಗಣೆ ದಪ್ಪ ಇರಬಾರದು. ಕಿವಿಗೆ ಹಿತವಾಗಿರಬೇಕು. ಭಾರ ಆಗಬಾರದು. ಹೀಗೆ ಹಲವು ರೀತಿಯ ಆಸೆಗಳು ಇರುತ್ತದೆ. ಇದಕ್ಕೆ ಪೂರಕವಾಗಿ ಈ ಶಂಖ ಆಭರಣ. ಏಕೆಂದರೆ ಶುದ್ಧ ಶಂಖದಿಂದ ಮಾತ್ರವಲ್ಲದೆ ಉತ್ತಮವಾದ ಫೈಬರ್, ಪ್ಲಾಸ್ಟಿಕ್ ಅನ್ನು ಬಳಸಿ ಬೇಸ್ ತಯಾರಿಸಿ ಅದರ ಮೇಲೆ ಚಿನ್ನವನ್ನು ಅಳವಡಿಸಿ ಈ ಆಭರಣವನ್ನು ತಯಾರಿಸುತ್ತಾರೆ. ಇದು ಕೆಂಪು, ಕಂದು ಬೇರೆ ಬೇರೆ ಬಣ್ಣಗಳಲ್ಲೂ ಇರುತ್ತವೆ.

ಶಂಖ ಆಭರಣದಲ್ಲಿ ಖಡಾ ಬಳೆಗಳೂ ಇವೆ. ಫ್ಯಾಷನೆಬಲ್ ಆಗಿ ಕಾಣುವ ಇದು ಕಾಲೇಜು ಯುವತಿಯರಿಗೆ ಹೇಳಿ ಮಾಡಿಸಿದಂತಿದೆ. ತುಂಬಾ ಬಳೆಗಳನ್ನು ಹಾಕಲು ಇಷ್ಟ ಪಡದವರಿಗೆ ಇದು ಬಹಳ ಸೂಕ್ತ ಏಕೆಂದರೆ ಅಗಲವಾಗಿದ್ದು ಕೈಯಲ್ಲಿ ಇದು ಶೋಭಿಸುತ್ತದೆ. ಇದರಲ್ಲಿ ಕುಸುರಿ ಕೆತ್ತನೆಯನ್ನೂ ಕೆತ್ತಿ ಅಂದವಾದ ನೋಟ ಬರುವಂತೆ ವಿನ್ಯಾಸಗೊಳಿಸಿ ಅನಂತರ ಚಿನ್ನವನ್ನು ಹುದುಗಿಸಲಾಗುತ್ತದೆ. ಅಗಲದ ಖಡಾ, ಸಪೂರದ ಖಡಾ ಬಳೆಗಳೂ ಇವೆ. ಯಾವುದೇ ಬಳೆಯಾಗಲಿ ಜಾಗರೂಕತೆ ಇರಬೇಕು. ಕೈಯಿಂದ ಬೀಳದಂತೆ ಕುಳಿತುಕೊಂಡೇ ಧರಿಸಿ, ಆದಷ್ಟು ಗೋಡೆಯ ಬದಿಯಲ್ಲಿ ಕೈ ತಾಗದಂತೆ ಗಮನಹರಿಸಿ. ಚಿನ್ನದ ವಿನ್ಯಾಸಗಳನ್ನು ಗಮ್‌ನ ಸಹಾಯದಿಂದ ಕೂರಿಸುವುದರಿಂದ ದಿನನಿತ್ಯ ಧರಿಸಬೇಡಿ.

ಇದು ಅಲಂಕಾರಿಕ ಆಭರಣ. ಎರಡೂ ಕೈಗೆ ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಒಂದೇ ತರವಾದ ಬಳೆಗಳನ್ನು ಧರಿಸಬಹುದು. ಆದರೆ ಇತರ ಕಾರ್ಯಕ್ರಮಗಳಿಗೆ ಧರಿಸುವಾಗ ಒಂದು ಬಳೆ ಎರಡನೆಯ ಕೈಗೆ ವಾಚ್, ಮುಂಗೈ ಸರಪಳಿ (ಬ್ರೇಸ್ಲೆಟ್) ಧರಿಸಿದರೆ ಹಿತ. ಶಂಖ ಆಭರಣಗಳು ಸ್ವಲ್ಪ ಮಟ್ಟಿಗೆ ಭಾರವಾಗಿರುತ್ತದೆ. ಬಿಳಿ ಬಣ್ಣದ ಬಳೆಗಳನ್ನು ಧರಿಸಿದ್ದರೆ, ಊಟ ಮಾಡುವಾಗ, ಮನೆಯ ಕೆಲಸಗಳನ್ನು ಮಾಡುವಾಗ ಗಮನಹರಿಸಿಕೊಳ್ಳಬೇಕು.

ಒಟ್ಟಿನಲ್ಲಿ ಇತ್ತೀಚೆಗೆ ಪ್ರಚಲಿತಗೊಂಡಿರುವ ಸುಂದರಿ ಆಭರಣಗಳಲ್ಲಿ ಶಂಖ ಆಭರಣ ಒಂದು. ಇದು ವಿಭಿನ್ನವಾಗಿ, ಆಕರ್ಷಕವಾಗಿ, ಹೊಸತನ ಹೊಂದಿದ್ದು ಗ್ರಾಹಕರ ಮನಸೂರೆಗೊಳ್ಳುವ ಆಭರಣ.

ಸಿನಿಮಾ ನಟಿಯರು, ಮಾಡೆಲಿಂಗ್ ತಾರೆಯರು, ಸೆಲೆಬ್ರಿಟಿಗಳು ಕೂಡ ಶಂಖಾಭರಣ ಇಷ್ಟಪಡುತ್ತಾರೆ. ಇದನ್ನು ಸಾಮಾನ್ಯ ಮಹಿಳೆಯರು ಧರಿಸಿ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದ್ದಾರೆ. ಇದೀಗ ಚಿನ್ನದಲ್ಲಿಯೂ ಲಭ್ಯವಿರುವ ಶಂಖಾಭರಣಗಳು ಆಧುನಿಕ ಮನೋಭಾವದ ಯುವತಿಯರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ.

